ನಿಯಮ-330
ಕ್ರ-69 ರಿಜಿಸ್ಟರ್

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ಮತ್ತು ಶ್ರೀ ಮರಿತಿಬ್ಬೇಗೌಡ ರವರುಗಳು ನಿಯಮ 330ರಡಿ ನೀಡಿರುವ ಸೂಚನೆಗೆ ಉತ್ತರ

**ಪ್ರಶ್ನೆ:** ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ಮತ್ತು ಶ್ರೀ. ಮರಿತಿಬ್ಬೇಗೌಡ ಅವರುಗಳು ಇತ್ತೀಚೆಗೆ ರಾಜ್ಯದ ಜಿಲ್ಲೆಯೊಂದರಲ್ಲಿನ ಧರ್ಮಪೀಠದ ಧರ್ಮಾಧಿಕಾರಿಗಳೊಬ್ಬರು ಮಠದಲ್ಲಿಯೇ ವ್ಯಾಸಂಗ ಮಾಡುತ್ತಿದ್ದ ಬಡ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಿ, ಈಗ ಧರ್ಮಾಧಿಕಾರಿಗಳ ವಿರುದ್ಧ ಪೋಕ್ಸೋ ಕಾಯ್ದೆ ಅಡಿಯಲ್ಲಿ ಕೇಸ್ ದಾಖಲಾಗಿದ್ದು, ಧರ್ಮಾಧಿಕಾರಿಗಳು ಈಗ ಕಾನೂನಿನ ರೀತ್ಯಾ ಸೆರೆವಾಸದಲ್ಲಿದ್ದಾರೆ. ಪೋಕ್ಸೋ ಕಾನೂನು ಅಪ್ರಾಪ್ತ ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಿಸುವ ಮಹತ್ತರ ಕಾಯ್ದೆ 2012ರ ಕಾಯ್ದೆ 2019ರಲ್ಲಿ ತಿದ್ದುಪಡಿಯಾಗಿ ಅಪರಾಧಿಗೆ ಜೀವಾವಧಿ ಶಿಕ್ಷೆ ಅಥವಾ ಮರಣದಂಡನೆ ವಿಧಿಸುವ ಅವಕಾಶವಿದ್ದು, ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಪ್ರಯತ್ನಿಸುವವರಿಗೆ ಇಂತಹ ಮಹತ್ತರ ಪೋಕ್ಸೋ ಕಾಯ್ದೆ ಪರಿಣಾಮಗಳ ಕುರಿತು ಪ್ರಸ್ತಾಪಿಸಿರುವ ಬಗ್ಗೆ.

**ಉತ್ತರ:** ಮುರುಘಾ ಮಠದಲ್ಲಿನ ದೌರ್ಜನ್ಯದ ಕುರಿತಂತೆ, ಮೈಸೂರು ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಮೊ.ಸಂಖ್ಯೆ:155/2022 ಕಲಂ: 376(2) (N), 376(3) ರೆ/ವಿ 149 IPC & 5(L), 6, 17 POCSO Act 2012 ರೀತ್ಯಾ ಪ್ರಕರಣ ದಾಖಲಾಗಿದ್ದು, ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ಪ್ರಕರಣವು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿದ್ದು, ಸದರಿ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ.ಸಂಖ್ಯೆ: 387/2022, ಕಲಂ: 376(2)(N), 376(3) ರೆ/ವಿ 149 IPC & 5(L), 6, 17 POCSO Act 2012 ರೀತ್ಯಾ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿರುತ್ತದೆ.

ಅತ್ಯಾಚಾರ, ಲೈಂಗಿಕ ಕಿರುಕುಳದಂತಹ ಪ್ರಕರಣಗಳಲ್ಲಿ ಕಠಿಣ ಶಿಕ್ಷೆ ಕೊಡಿಸಲು ಮತ್ತು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವ ಹಿನ್ನಲೆಯಲ್ಲಿ ಭಾರತ ಸರ್ಕಾರವು ಪೋಕ್ಸೋ ಕಾಯ್ದೆಯನ್ನು ಜಾರಿಗೆ ತಂದಿರುತ್ತದೆ. ಇದಲ್ಲದೆ ಅಪರಾಧ ಕಾನೂನಿಗೂ ಸಹ ತಿದ್ದುಪಡಿಯನ್ನು ತಂದಿರುತ್ತದೆ. ಸದರಿ ಪೋಕ್ಸೋ ಕಾಯ್ದೆ ಹಾಗೂ ಅಪರಾಧ ಕಾನೂನು ತಿದ್ದುಪಡಿ ಕಾಯ್ದೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಸುತ್ತೋಲೆಯ ಮೂಲಕ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಸದರಿ ಅಪರಾಧ ಕಾನೂನು ತಿದ್ದುಪಡಿ ಹಾಗೂ ಪೋಕ್ಸೋ ಕಾಯ್ದೆಯಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿರುತ್ತದೆ. ಸದರಿ ಕಾನೂನಿನ ತಿದ್ದುಪಡಿಯು ಈ ಕೆಳಕಂಡ ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ.

- ಪ್ರಕರಣದ ತನಿಖಾ ಅವಧಿಯನ್ನು 90 ದಿನದಿಂದ 60 ದಿನಗಳಿಗೆ ಕಡಿತಗೊಳಿಸಿ ಪೂರ್ಣಗೊಳಿಸಬೇಕೆಂದು ನಿರ್ದೇಶಿಸಲಾಗಿರುತ್ತದೆ.
- ಕಲಂ 376 (ಎಬಿ)ರಡಿ 12 ವರ್ಷದೊಳಗಿನವರ ಮೇಲಿನ ಅತ್ಯಾಚಾರಕ್ಕೆ ಕನಿಷ್ಠ 20 ವರ್ಷಗಳ ಶಿಕ್ಷೆಯಿಂದ ಆರೋಪಿಯ ಜೀವ ಇರುವವರೆಗೆ ಸೆರೆವಾಸದ ಶಿಕ್ಷೆಗೆ ವಿಸ್ತರಣೆ ಮತ್ತು ದಂಡ ಅಥವಾ ಮರಣದಂಡನೆ ಶಿಕ್ಷೆ ವಿಧಿಸಬಹುದಾಗಿದೆ.
- ಕಲಂ 376 (ಡಿಎ)ರಡಿ 16 ವರ್ಷದೊಳಗಿನವರ ಮೇಲಿನ ಸಾಮೂಹಿಕ ಅತ್ಯಾಚಾರಕ್ಕೆ (Gang rape)ಗೆ ಜೀವಾವಧಿ ಶಿಕ್ಷೆ ಅಂದರೆ ಆರೋಪಿಯ ಜೀವ ಇರುವವರೆಗೆ ಸೆರೆವಾಸ ಮತ್ತು ದಂಡ ಶಿಕ್ಷೆ.

- ಕಲಂ 376(ಡಿಬಿ)ರಡಿ 12 ವರ್ಷದೊಳಗಿನವರ ಮೇಲಿನ ಸಾಮೂಹಿಕ ಅತ್ಯಾಚಾರಕ್ಕೆ (Gang rape)ಗೆ ಜೀವಾವಧಿ ಶಿಕ್ಷೆ ಅಂದರೆ ಆರೋಪಿಯ ಜೀವ ಇರುವವರೆಗೆ ಸೆರೆವಾಸ ಮತ್ತು ದಂಡ ಅಥವಾ ಮರಣದಂಡನೆ ಶಿಕ್ಷೆ.
- 12 ವರ್ಷದೊಳಗಿನ ಮತ್ತು 16 ವರ್ಷದೊಳಗಿನ ಹೆಣ್ಣು ಮಕ್ಕಳ ಅತ್ಯಾಚಾರ ಅಥವಾ ಸಾಮೂಹಿಕ ಅತ್ಯಾಚಾರ ಪ್ರಕರಣಗಳು ಜಾಮೀನು ರಹಿತ ಅಪರಾಧಗಳಾಗಿರುತ್ತವೆ.
- ನ್ಯಾಯಾಲಯದ ವಿಚಾರಣೆಯನ್ನು 2 ತಿಂಗಳಲ್ಲಿ ಹಾಗೂ ಮೇಲ್ಮನವಿಗಳನ್ನು 6 ತಿಂಗಳುಗಳಲ್ಲಿ ಇತ್ಯರ್ಥ ಪಡಿಸುವುದು.
- ಕನಿಷ್ಠ 20 ವರ್ಷಗಳ ಶಿಕ್ಷೆಯಿಂದ ಆರೋಪಿಯ ಜೀವ ಇರುವವರೆಗೆ ಸೆರೆವಾಸ ಶಿಕ್ಷೆ ಮತ್ತು ದಂಡ ಅಥವಾ ಗರಿಷ್ಟ ಮಟ್ಟದ ಮರಣ ದಂಡನೆಯಂತಹ ಕಠಿಣ ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ಬಂದಿರುತ್ತದೆ.

HD 20 SDN 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು